**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕಃ 17.06.2026

**ಮುಂದುವರೆದ ಪಾಟೀ ಸವಾಲು:-** ಶ್ರೀ ಜಿ.ಎನ್.ಆರ್ ವಾದಿಯ ಪರ ವಕೀಲರಿಂದ

ಸ.ನಂ 185/2 ನ್ನು ಸ.ನಂ 85/1 ಎಂದು ತಿದ್ದುಪಡಿ ಮಾಡಿಕೊಂಡಿದ್ದು ಹಾಗೆ ಮಾಡಿಕೊಳ್ಳುವ ಕಾಲಕ್ಕೆ ಯಾರ ಹೆಸರಿಗೆ ಪಹಣಿ ಇತ್ತು ಎಂದರೆ ಗೊತ್ತಿಲ್ಲ. ಸ.ನಂ 185/2 ರ ಪಹಣಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಸ.ನಂ 85/1 ನಮಗೆ ಸಂಬಂಧಪಟ್ಟಿದ್ದರಿಂದ ಆ ಪಹಣಿಯನ್ನು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಅಸಲು ದಾವಾ 72/2008 ರ ದಾವೆಯನ್ನು ಯಾವ ಸ.ನಂ ಗೆ ಹಾಕಿದ್ದೀರಿ ಎಂದರೆ ಸಾಕ್ಷಿಯು ಸ.ನಂ 185/2 ಎಂದು ತಪ್ಪಾಗಿದ್ದು ಅದನ್ನು ಸ.ನಂ 85/1 ಎಂದು ತಿದ್ದುಪಡಿ ಮಾಡಿಕೊಡಿ ಎಂದು ದಾವೆ ಸಲ್ಲಿದ್ದೇವು ಎಂದು ನುಡಿಯುತ್ತಾರೆ. ಈ ಹಿಂದೆ ವಾದಿಯು ಅಸಲು ದಾವಾ 383/2002 ನ್ನು ನನ್ನ ತಂದೆ ಮತ್ತು ನನ್ನ ವಿರುದ್ಧ ಹಾಕಿದ್ದರು ಎಂದರೆ ಸರಿ. ಆ ದಾವೆಯನ್ನು ಸ.ನಂ 85/1ರ 10 ಗುಂಟೆಗೆ ಹಾಕಿದ್ದರು. ಸದರಿ ಸ್ವತ್ತಿನ ಚೆಕ್ಕುಬಂದಿ ಪೂಃ ಸ.ನಂ 85/2 ರ ಸ್ವತ್ತು, ಪಶ್ಚಿಮಃ ಸರ್ಕಾರಿ ಜಮೀನು, ಉತ್ತರಃ ಸ.ನಂ 48 ಸರ್ಕಾರಿ ಜಮೀನು, ದಕ್ಷಿಣಃ ಸ.ನಂ 85/2 ರ ಸ್ವತ್ತು, ಸದರಿ ಸ್ವತ್ತಿನಲ್ಲಿ ಮೊದಲು ನಂಜೇಗೌಡ, ನಂತರ ರಾಮೇಗೌಡರವರು ಇದ್ದರು.

ಸ.ನಂ 85/1ರ 10 ಗುಂಟೆಗೆ ವಾದಿಯೇ ಮಾಲೀಕರು, ಹಕ್ಕುದಾರರು, ಸ್ವಾಧೀನದಾರರು ಎಂದು ಅಸಲು ದಾವಾ 383/2002 ರಲ್ಲಿ ಡಿಕ್ರಿಯಾಗಿದೆ ಎಂದರೆ ಸರಿಯಲ್ಲ. ಹಾಗಾದರೆ ನಾವು ಸಲ್ಲಿಸಿದ್ದ ಅಸಲು ದಾವಾ 72/2008 ರಲ್ಲಿ ವಾದಿಯನ್ನು ಏಕೆ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಅಸಲು ದಾವಾ 383/2002ರ ರಲ್ಲಿ ಹೇಳಿದ್ದ ಸ್ವತ್ತು ಮತ್ತು ಅಸಲು ದಾವಾ 72/2008 ರಲ್ಲಿ ಹೇಳಿದ ಸ್ವತ್ತು ಬೇರೆ ಎಂದು ನುಡಿಯುತ್ತಾರೆ. ನಿಡಿ-4 ರ ಪ್ರಕಾರ ಜವರೇಗೌಡ ಬಿನ್ ಲಿಂಗೇಗೌಡ ಯಾರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ವಾದಿಯ ತಂದೆ ಮತ್ತು ತಾತ ಎಂದರೆ ನನಗೆ ಗೊತ್ತಿಲ್ಲ. ಎಂ.ಆರ್ 38/1936-37 ನೇ ಸಾಲಿನಲ್ಲಿ ವಾದಿಯ ತಾತನ ಹೆಸರಿಗೆ ದಾವಾ ಸ್ವತ್ತು ಖಾತೆ ಆಗಿದೆ ಎಂದರೆ ಸಾಕ್ಷಿಯು ಕೈತಪ್ಪಿನಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ.

ಅಸಲು ದಾವಾ 72/2008 ನ್ನು ಹಾಕುವ ಕಾಲಕ್ಕೆ ಎಂ.ಆರ್ ಮತ್ತು ಖಾತಾ ವಾದಿಯ ತಾತನ ಹೆಸರಿಗೆ ಇತ್ತು ಎಂದರೆ ಗೊತ್ತಿಲ್ಲ. ಈ ವಿಚಾರ ಗೊತ್ತಿದ್ದರು ಸಹ ಎಲ್ಲಾ ವಿಚಾರಗಳನ್ನು ಮರೆ ಮಾಚಿ ಅಸಲು ದಾವಾ 72/2008 ನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಮೋಸದಿಂದ ಡಿಕ್ರಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಕುವ ಕಾಲಕ್ಕೆ ಆರ್.ಎಸ್.ಎ ಇನ್ನು ಚಾಲ್ತಿ ಇದ್ದು ಸದರಿ ವಿಚಾರವನ್ನು ಅಸಲು ದಾವಾ 72/2008 ರಲ್ಲಿ ಹೇಳಿದ್ದೀರಾ

ಎಂದರೆ ಸಾಕ್ಷಿಯು ಆ ದಾವಾ ಸ್ವತ್ತು ಬೇರೆ ಈ ಸ್ವತ್ತು ಬೇರೆ ಎಂದು ನುಡಿಯುತ್ತಾರೆ. ಆರ್.ಎಸ್.ಎ 845/2010 ನ್ನು ಯಾವ ಸ.ನಂ ಮೇಲೆ ಹಾಕಿದ್ದೀರಿ ಎಂದರೆ ಸಾಕ್ಷಿಯು ಸ.ನಂ 85/1ರ 10 ಗುಂಟೆಗೆ ಹಾಕಿದ್ದೇವು ಎಂದು ನುಡಿಯುತ್ತಾರೆ. ಸದರಿ ಸ.ನಂ ಮತ್ತು ಅಸಲು ದಾವಾ 383/2002 ರ ಸ.ನಂ ಎರಡು ಒಂದೇ ಎಂದರೆ ಸರಿ. ಎಲ್ಲಾ ವಿಚಾರಗಳನ್ನು ಮರೆಮಾಚಿ ಅಸಲು ದಾವಾ ನಂ 72/2008 ಹಾಗೂ ಜಾರಿ ಮೊಕದಮ್ಮೆಯನ್ನು ಹಾಕಿರುವುದು ವಾದಿಯ ಹಕ್ಕನ್ನು ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ.

ಅಸಲು ದಾವಾ 383/2002 ನಡೆಯುವ ಕಾಲಕ್ಕೆ ಹಾಕಿದ್ದ ಆಕ್ಷೇಪಣೆಯನ್ನೇ ಪ್ರಸ್ತುತ ದಾವೆಯಲ್ಲೂ ಸಲ್ಲಿಸಿರುತ್ತೇವೆ ಎಂದರೆ ಸರಿ. ವಾದಿ ಊರಿನಲ್ಲಿ ಇಲ್ಲದೇ ಇರುವಾಗ ನಿಡಿ-44, 45 ನಕ್ಷೆಯನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಈಗಲೂ ಸಹ ವಾದಿಯೇ ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿಯು ನಾನೇ ಸ್ವಾದೀನ ಇದ್ದೇನೆ ಎಂದು ನುಡಿಯುತ್ತಾರೆ. ದಿಃ 29.10.1999 ರ ವಿಭಾಗದಂತೆ ದಾವಾ ಸ್ವತ್ತು ವಾದಿಯ ಹಿಸ್ಸೆಗೆ ಬಂದು ಅವರೇ ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿಯು ಪಾಲುಪಟ್ಟಿಯನ್ನು ಆ ರೀತಿ ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಹೊಳೆನರಸೀಪುರದ ನ್ಯಾಯಾಲಯದ ಸೇಲ್ ಸರ್ಟಿಪಿಕೇಟ್ ಮೂಲಕ ವಾದಿಯ ತಾತನಿಗೆ ಬಂದಿದ್ದು ನಂತರ ವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ 1941 ರಲ್ಲಿ ವಾದಿಯ ತಾತ ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸ.ನಂ 85/1ರ ಸ್ವತ್ತನ್ನು ವಾದಿಯ ಕುಟುಂಬದವರು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಅಸಲು ದಾವಾ ನಂ 72/2008 ರಲ್ಲಿ ಏಕಪಕ್ಷೀಯವಾಗಿ ಡಿಕ್ರಿ ಪಡೆದಿದ್ದು ಇದಕ್ಕೂ ಮತ್ತು ವಾದಿಯ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸ.ನಂ 185/2 ಮತ್ತು ಸ.ನಂ 85/1ರ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಿಡಿ-30 ನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾಖಲಾತಿಯಲ್ಲಿ ಸ.ನಂ 185/1 ರಲ್ಲಿ ಕಾಯಿಬೆಟ್ಟೆಗೌಡ ಬಿನ್ ಲಕ್ಕೇಗೌಡ 2 ಎಕರೆ 6 ಗುಂಟೆ, ಸ.ನಂ 185/2 ರಲ್ಲಿ ಲಕ್ಕೇಗೌಡ ಬಿನ್ ಮುದ್ದೇಗೌಡ 35 ಗುಂಟೆ ಎಂದು ನಮೂದು ಆಗಿದೆ ಎಂದರೆ ಸಾಕ್ಷಿಯು ನಮಗೆ ಸಂಬಂಧಪಟ್ಟಿದ್ದಲ್ಲ ಎಂದು ನುಡಿಯುತ್ತಾರೆ. ಸದರಿಯವರನ್ನು ಅಸಲು ದಾವಾ 72/2008 ರಲ್ಲಿ ಪಕ್ಷಗಾರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುುತ್ತಾರೆ. ನಿಡಿ-33 ನ್ನು ಹಾಜರು ಮಾಡಿದ್ದು ಅದರಲ್ಲಿ ಸ.ನಂ 85/1, ಸ.ನಂ 85/1, ಸ.ನಂ 85/1 ಎಂದು ಕಾಯಿಬೆಟ್ಟೆಗೌಡ ಬಿನ್ ಲಕ್ಕೇಗೌಡ, ಲಕ್ಕೇಗೌಡ ಬಿನ್ ಮುದ್ದೇಗೌಡ, ಜವರೇಗೌಡ ಬಿನ್ ಲಿಂಗೇಗೌಡ ಎಂದು ನಮೂದು ಆಗಿದೆ ಎಂದರೆ ಸಾಕ್ಷಿಯು ಕೈತಪ್ಪಿನಿಂದ ನಮೂದು ಆಗಿದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ರದ್ದು ಮಾಡುವಂತೆ ಸಕ್ಷಮ ನ್ಯಾಯಾಲಯದಲ್ಲಿ

ದಾವೆಗಳನ್ನು ಸಲ್ಲಿಸಿರುವುದಿಲ್ಲ.

ನಮ್ಮ ಹೆಸರಿಗೆ ಖಾತೆ ಬಂದಿದ್ದು ಅದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾವು ಸ್ವಾಧೀನ ಇದ್ದು ಕ್ರಯ ಪತ್ರ ಇರುವ ಕಾರಣ ನಮ್ಮ ಹೆಸರಿಗೆ ಖಾತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆರ್.ಎ 12/2012-13 ನ್ನು ಎಸಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದೆ ಎಂದರೆ ಸರಿ. ನಿಡಿ-56 ರಲ್ಲಿ ನ್ಯಾಯಾಲಯದ ಆದೇಶದಂತೆ ನಮ್ಮ ಹೆಸರಿಗೆ ಖಾತೆ ಕುರಿಸಿದ್ದಾರೆ ಎಂದರೆ ಸರಿ. ನಿಡಿ-56 ರಲ್ಲಿ ವಾದಿಯನ್ನು ಪಾರ್ಟಿ ಮಾಡಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತನ್ನು ಹೇಗಾದರು ಮಾಡಿ ಹೊಡದುಕೊಳ್ಳುವ ಕಾರಣಕ್ಕೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ